# ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ. ನ್ಯಾಯಾಲಯ, ತಿ.ನರಸೀಪುರ.

## ಸಿ.ಸಿ. ಸಂಖ್ಯೆ: 3193/2022

| ಪಿರ್ಯಾದುದಾರರು | ವಿರುದ್ಧ | ಆರೋಪಿತರು |
|---|---|---|
| ಬನ್ನೂರು ಪೊಲೀಸ್ | | ಸುಮಾ |

## ದೋಷಾರೋಪಣೆ

ಶ್ರೀ ಶ್ಯಾಮ್ ಪ್ರಕಾಶ್, ಬಿ.ಎ.ಎಲ್.ಎಲ್.ಎಲ್.ಬಿ., ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ತಿ.ನರಸೀಪುರ ಆದ ನಾನು ನಿಮ್ಮ ಮೇಲೆ ಅಂದರೆ

ಆರೋಪಿತರಾದ : ಸುಮಾ,
ಕೋಂ. ವೆಂಕಟೇಶ,
ವಯಸ್ಸು ಸುಮಾರು 27 ವರ್ಷ,
ವಾಸ ತುರುಗನೂರು ಗ್ರಾಮ,
ಟಿ,ನರಸೀಪುರ ತಾಲ್ಲೂಕು,
ಮೈಸೂರು ಜಿಲ್ಲೆ.

**ನಿಮ್ಮಗಳ ಮೇಲೆ ದೋಷಾರೋಪಣೆ ಮಾಡುವುದು ಏನೆಂದರೆ,**

ದಿನಾಂಕ 16.01.2019 ರ ಹಿಂದಿನ ದಿನಗಳಲ್ಲಿ ತಿ.ನರಸೀಪುರ ತಾಲ್ಲೂಕು ಬನ್ನೂರು ಪೊಲೀಸ್ ಠಾಣೆ ಸರಹದ್ದು ತುರಗನೂರು ಗ್ರಾಮದಲ್ಲಿರುವ ಚಾಸಾ.1 ರವರ ಕೆ.ಎಸ್.ಎ. ಸೋಷಿಯಲ್ ಆಕ್ಷನ್ ಕಚೇರಿಯಲ್ಲಿ ಆರೋಪಿಯಾದ ನೀವು 2016 ನೇ ಸಾಲಿನಿಂದ ಮ್ಯಾನೇಜರ್ ಕೆಲಸಕ್ಕೆ ನೇಮಕವಾಗಿದ್ದು, ನಿಮ್ಮ ತಾಯಿ ಸುನಂದ ಮತ್ತು ಸಹೋದರಿ ಸುಷ್ಮಾ ರವರ ಹೆಸರನ್ನು ಹಾಜರಾತಿ ಪುಸ್ತಕದಲ್ಲಿ ಸೇರಿಸಿ 2018 ನೇ ಸಾಲಿನ ಮೇ ತಿಂಗಳಿನಿಂದ ಸೆಪ್ಟೆಂಬರ್ ರವರೆವಿಗೆ ಒಟ್ಟು ರೂ.20,800/- ರೂ ಸಂಬಳದ ಹಣ ಪಡೆದು ಎನ್.ಜಿ.ಒ ಸಂಸ್ಥೆಗೆ ಅಪರಾಧಿಕ ನಂಬಿಕೆ ದ್ರೋಹವನ್ನು ಮಾಡಿರುತ್ತೀರಿ. ನಿಮ್ಮ ಈ ಕ್ರಮ ಭಾರತ ದಂಡ ಸಂಹಿತ ಕಲಂ 408 ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾದವೆಸಗಿರುತ್ತೀರಿ.

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ, ಆರೋಪಿಯಾದ ನೀವು ನಿಮ್ಮ ತಾಯಿ ಸುನಂದ ಮತ್ತು ಸಹೋದರಿ ಸುಷ್ಮಾ ರವರ ಹೆಸರನ್ನು ಹಾಜರಾತಿ ಪುಸ್ತಕದಲ್ಲಿ ಸೇರಿಸಿ

2018 ನೇ ಸಾಲಿನ ಮೇ ತಿಂಗಳಿನಿಂದ ಸೆಪ್ಟೆಂಬರ್ ರವರೆವಿಗೆ ಒಟ್ಟು ರೂ.20,800/- ರೂ ಸಂಬಳದ ಹಣ ಪಡೆದು ಎನ್.ಜಿ.ಒ ಸಂಸ್ಥೆಗೆ ಮೋಸ ಮಾಡಿದ್ದು, ಆ ಮೂಲಕ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ.420 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೇಲಿನ ಆರೋಪಣೆಗೆ ನೀವು ಈ ನ್ಯಾಯಾಲಯದ ಮುಂದೆ ವಿಚಾರಣೆ ಎದುರಿಸಬೇಕೆಂದು ಆದೇಶಿಸುತ್ತೇನೆ.

ದಿಃ 16.07.2024.

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**
**ಟಿ.ನರಸೀಪುರ.**

**<u>ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ. ನ್ಯಾಯಾಲಯ, ತಿ.ನರಸೀಪುರ.</u>**

**ಸಿ.ಸಿ. ಸಂಖ್ಯೆ 3193/2022**

| | | |
|---|---|---|
| ಆರೋಪಿಯ ಹೆಸರು | ಃ | ಸುಮಾ, |
| ಪ್ರಾಯ | ಃ | 27 ವರ್ಷ |
| ಗಂಡ | ಃ | ವೆಂಕಟೇಶ, |
| ವಾಸ | ಃ | ತುರುಗನೂರು ಗ್ರಾಮ,<br>ಟಿ,ನರಸೀಪುರ ತಾಲ್ಲೂಕು,<br>ಮೈಸೂರು ಜಿಲ್ಲೆ., |

**<u>ಆರೋಪಿತನ ಹೇಳಿಕೆ</u>**

ಪ್ರಶ್ನೆಃ-1. ಈಗ ಓದಿ ಹೇಳಲಾದ ಆರೋಪಣೆ ತಿಳಿಯಿತೆ ?

ಉತ್ತರಃ-

ಪ್ರಶ್ನೆಃ-2. ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಗೆ ಒಳಪಡಲು ಬಯಸುವಿರಾ?

ಉತ್ತರಃ-

ದಿನಾಂಕಃ 16.07.2024

**ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂ., ಟಿ.ನರಸೀಪುರ.**